ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ದೂರವಾಣಿ : ಕಛೇರಿ : 080-22257334
ಫ್ಯಾಕ್ಸ್ : 080-22385545
6ನೇ ಮಹಡಿ, ಗೇಟ್ ನಂ. 2
ಬಹುಮಹಡಿಗಳ ಕಟ್ಟಡ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು – 560 001
E-mail: prsprim-edu@karnataka.gov.in

ಸಂಖ್ಯೆ:ಪ್ರಕಾ:ಪ್ರಾಪ್ರೌಶಿ:552/2018 ದಿನಾಂಕ:05.06.2018

ಮಾನ್ಯರೆ,

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವತಿಯಿಂದ **ಸ್ಫೂರ್ತಿ ಸಂಶೋಧನೆಗಾಗಿ ವಿಜ್ಞಾನ ಅನ್ವೇಷಣೆಯಲ್ಲಿ ಆವಿಷ್ಕಾರ** (ಇನ್ಸ್ಪೈರ್) ಎಂಬ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಮೂಲಕ ಸಾಮಾಜಿಕ ಆವಶ್ಯಕತೆಗಳನ್ನು ಬಗೆಹರಿಸಲು ಶಾಲಾ ಮಕ್ಕಳಲ್ಲಿ ಸೃಜನಶೀಲತೆ, ಸಾಂಸ್ಕೃತಿಕ ಮತ್ತು ನವೀನ ಚಿಂತನೆಯನ್ನು ಬೆಳೆಸುವ ಉದ್ದೇಶ ಇದರದ್ದಾಗಿದೆ.

ಆದುದರಿಂದ ಪ್ರತಿ ಶಾಲೆಯಿಂದ ವಿದ್ಯಾರ್ಥಿಗಳಿಂದ ಗರಿಷ್ಠ 5 ವಿನೂತನ ವಿಚಾರಗಳನ್ನು ಆಯ್ಕೆ ಮಾಡಿ http://www.inspireawards-dst.gov.in ವೆಬ್-ಲಿಂಕ್ ಮೂಲಕ ಪ್ರಿನ್ಸಿಪಾಲ್/ಹೆಡ್ ಮಾಸ್ಟರ್‌ಗಳು ಪೋರ್ಟಲ್‌ನಲ್ಲಿ ದಿನಾಂಕ 31.07.2018ರೊಳಗೆ ಅಪ್ಲೋಡ್ ಮಾಡತಕ್ಕದ್ದು. ದೇಶದಲ್ಲಿ ಸುಮಾರು 1 ಲಕ್ಷ ವಿಚಾರಗಳನ್ನು ಆಯ್ಕೆ ಮಾಡಲಾಗುವುದು ಹಾಗೂ ಅವರಿಗೆ **ರೂ. 10,000ರಂತೆ ಪ್ರಶಸ್ತಿಯನ್ನು ನೇರವಾಗಿ ಮಕ್ಕಳ ಖಾತೆಗಳಿಗೆ ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್ಫರ್ (DBT) ಯೋಜನೆಯ ಮೂಲಕ ನೀಡಲಾಗುವುದು.**

ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಆಯ್ಕೆಯಾದ ವಿಚಾರಗಳನ್ನು ಜಿಲ್ಲಾ ಮಟ್ಟದ ವಿಜ್ಞಾನ ಪ್ರದರ್ಶನದಲ್ಲಿ ಮಾದರಿ ರೂಪದಲ್ಲಿ ಪ್ರದರ್ಶಿಸಲಾಗುವುದು. ಈ ಪೈಕಿ ಆಯ್ಕೆಯಾದ 10,000 ಮಾದರಿಗಳನ್ನು ಆಯಾಯ ರಾಜ್ಯ ಮಟ್ಟದಲ್ಲಿ ಪ್ರದರ್ಶಿಸಲಾಗುವುದು. ಅದರಲ್ಲಿ **ಅತ್ಯುತ್ತಮ ಮಾದರಿಗಳನ್ನು ಆಯ್ಕೆ ಮಾಡಿ ರೂ. 50,000 ಪ್ರಶಸ್ತಿಯನ್ನು** ನೀಡಿ ಒಬ್ಬ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊಫೆಸರ್ ರವರ ಮಾರ್ಗದರ್ಶನದಲ್ಲಿ ಒಂದು ವಾಣಿಜ್ಯ ಯೋಜನೆಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ಅಂತಿಮವಾಗಿ ಅತೀ ಉತ್ತಮವಾದ 60 ಆವಿಷ್ಕಾರಗಳನ್ನು ರಾಷ್ಟ್ರಪತಿ ಭವನದಲ್ಲಿ ಪ್ರದರ್ಶಿಸಲಾಗುವುದು.

ಈ ಉತ್ತಮ ಅವಕಾಶವನ್ನು ಎಲ್ಲಾ **ವಿಜ್ಞಾನ ಶಿಕ್ಷಕರುಗಳು** ಉಪಯೋಗಿಸಿಕೊಂಡು ಮಕ್ಕಳನ್ನು ಉತ್ತೇಜಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅನುವು ಮಾಡಬೇಕೆಂದು ಕೋರುತ್ತೇನೆ. ಈ ಯೋಜನೆಯ ವಿವರ ಹಾಗೂ ಪೋಸ್ಟರ್‌ನ್ನು ಅಂಚೆ ಮೂಲಕ ಎಲ್ಲಾ ಶಾಲೆಗಳಿಗೆ ತಲುಪಿಸಲು ಕ್ರಮ ಕೈಗೊಳ್ಳವುದು.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
(ಡಾ. ಶಾಲಿನಿ ರಜನೀಶ್)

ಶ್ರೀ ಎಂ.ಟಿ. ರೇಜು, ಭಾ.ಆ.ಸೇ
ಆಯುಕ್ತರು (ಪ್ರಭಾರ),
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಪ್ರತಿ:

1. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
2. ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಹೊಸಕೆರೆಹಳ್ಳಿ, ಬೆಂಗಳೂರು.
4. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.

(ಡಾ. ಶಾಲಿನಿ ರಜನೀಶ್)

Scanned by CamScanner